# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆಃ 1096/2020

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಉಮೇಶ್ ಪಿ | ಪಿಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | – | ಪುಟ್ಟ ಸುಬ್ಬಣ್ಣ | ಪಿಡಬ್ಲ್ಯೂ-1 |
| ವಯಸ್ಸು | – | ಸು.56 ವರ್ಷ | ಪ್ರ.ವ.ಬೋ<br>ದಿನಾಂಕಃ15.03.2024 |
| ಉದ್ಯೋಗ | – | ಆರ್.ಟಿ.ಓ., ಕೆ ಆರ್ ಪುರಂ, ಬೆಂಗಳೂರು. | |
| ವಾಸ | – | ಬೆಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ-**

ಚಾಸಾ-2 ಮತ್ತು 3 ರವರ ಪರಿಚಯ ಇದೆ. ಮೃತ ಸುರೇಶ್ ನನಗೆ ಗೊತ್ತು. ದಿಃ24.05.2019 ರಂದು ನಾನು ಮೃತ ಸುರೇಶ್ ಹಾಗೂ ಚಾಸಾ-2 ಮತ್ತು 3 ರವರೊಂದಿಗೆ ಗುಯಿಲಾಳು ಟೋಲ್ ಬಳಿ, ವಾಹನ ತಪಾಸಣೆ ಮಾಡುತ್ತಿದ್ದಾಗ, ದಿಃ25.05.2019 ರಂದು ಬೆಳಗಿನ ಜಾವ 12.15 ರ ಸಮಯದಲ್ಲಿ ನಾವುಗಳು ನಮ್ಮ ಜೀಪ್ ಸಂ.KA 16- G-3636 ಬಳಿ ಇದ್ದಾಗ ಒಂದು ಲಾರಿ ಚಿತ್ರದುರ್ಗದ ಕಡೆಯಿಂದ ಹಿರಿಯೂರು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಜೀಪ್ ಬಳಿ ನಿಂತಿದ್ದ ಸುರೇಶ್ ಅವರಿಗೆ ಡಿಕ್ಕಿ ಪಡಿಸಿ ಲಾರಿಯನ್ನು ನಿಲ್ಲಿಸಿದ ಹೋಗಿರುತ್ತದೆ . ಸದರಿ ಲಾರಿಯ ಸಂಖ್ಯೆ: MH 14 GU 8052 ಆಗಿರುತ್ತದೆ. ಅಪಘಾತದಿಂದಾಗಿ ನಮ್ಮ ಡ್ರೈವರ್ ಸುರೇಶ್ ಅವರ ತಲೆಗೆ ತೀವ್ರವಾಗಿ ಪೆಟ್ಟು ಬಿದ್ದು, ಕಿವಿ ಮತ್ತು ಮೂಗಿನಲ್ಲಿ ರಕ್ತ ಬರುತ್ತಿತ್ತು . ಅವರನ್ನು ನಮ್ಮ ಇಲಾಖಾ ವಾಹನದಲ್ಲಿ ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಗೆ ದಾಖಲು ಮಾಡಿರುತ್ತೇನೆ . ನಂತರ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಎಸ್ ಎಸ್ ಆಸ್ಪತ್ರೆಗೆ ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿರುತ್ತೇವೆ . ಎಸ್ ಎಸ್ ಆಸ್ಪತ್ರೆಯ ವೈದ್ಯರು ಬೆಳಗಿನ ಜಾವ 3.00 ಸಮಯದಲ್ಲಿ ಸುರೇಶ್ ಮೃತಪಟ್ಟರು ಎಂದು ತಿಳಿಸಿರುತ್ತಾರೆ. ಅದೇ ದಿನ ಬೆ.6.00 ಗಂಟೆಗೆ

ಐಮಂಗಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ . ಸಾಕ್ಷಿಯು ನೋಡಿ ಗುರುತಿಸಿದ ದೂರನ್ನು **ನಿಪಿ-1** ಎಂದು ಸಾಕ್ಷಿಯ ಸಹಿಯನ್ನು **ನಿಪಿ-1(ಎ)** ಎಂದು ಗುರುತಿಸಲಾಯಿತು.

ಅಪಘಾತದ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಸದರಿ ಲಾರಿಯ ಚಾಲಕನಾಗಿರುತ್ತಾನೆ ಎಂದು ಸಾಕ್ಷಿಯು ನುಡಿಯುತ್ತಾರೆ.

ದಿಃ28.05.2019 ರಂದು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ. ಈ ಅಪಘಾತಕ್ಕೆ ಆರೋಪಿಯ ಅತೀ ವೇಗ ಮತ್ತು ನಿರ್ಲಕ್ಷತೆಯ ಚಾಲನೆ ಕಾರಣವಾಗಿರುತ್ತದೆ.

**ಪಾಟೀ-ಸವಾಲುಃ ಆರೋಪಿ ಪರ ಶ್ರೀ.ಬಿ ಎಲ್ ಎಸ್ ವಕೀಲರಿಂದಃ**

ನಾವು ದಿಃ24.05.2019 ರಂದು ತಪಾಸಣೆಗೆ 4 ಜನ ಹೋಗಿರುತ್ತೇವೆ. ಅದರಲ್ಲಿ ಚಾಸಾ-2 ಮಂಜುನಾಥ್ ಮತ್ತು ಚಾಸಾ- 3 ಸತ್ತರ್ ಆಗಿದ್ದಾರೆ. ಹಿರಿಯೂರು -ಚಿತ್ರದುರ್ಗ ರಸ್ತೆ 6 ಪಥದ ರಸ್ತೆ ಎಂದರೆ ಸರಿ. ಟೋಲ್ ನಿಂದ ಹಿರಿಯೂರು ಕಡೆ 200 ಮೀ ಅಂತರದಲ್ಲಿ ಅಪಘಾತ ನಡೆದಿರುತ್ತದೆ. ಚಿತ್ರದುರ್ಗ ದಿಂದ ಹಿರಿಯೂರು ಕಡೆ ಬರುವ ರಸ್ತೆಯಲ್ಲಿ ಎಡಭಾಗ 18-20 ಅಡಿ ಹೆಚ್ಚುವರಿ ಜಾಗ ಇದ್ದು, ಅಲ್ಲಿ ವಾಹನಗಳು ನಿಲ್ಲುತ್ತವೆ ಮತ್ತು ಅಲ್ಲಿ ಅಂಗಡಿಗಳು ಇವೆ ಎಂದರೆ ಸರಿ. ಸದರಿ ಜಾಗದ ಎಡಭಾಗಕ್ಕೆ ಸರ್ವಿಸ್ ರೋಡ್ ನಂತರ ಶೌಚಾಲಯಗಳು ಇವೆ ಎಂದರೆ ಸರಿ.

ನಮ್ಮ ವಾಹನ 3 ಪಥದ ರಸ್ತೆಯ ಎಡಭಾಗದಲ್ಲಿ ನಿಂತಿತ್ತು. ವಾಹನದ ಬಳಿ ನಾನು, ಚಾಸಾ-2 ಮತ್ತು 3 ಹಾಗೂ ಮೃತ ಸುರೇಶ್ ಇದ್ದೆವು. ವಾಹನಗಳನ್ನು ತಪಾಸಣೆ ನಡೆಸುವಾಗ ವಾಹನಗಳಿಗೆ ನಿಲ್ಲಿಸುವಂತೆ ಸೂಚನೆ ನೀಡಿ ಎಡಕ್ಕೆ ಕರೆಯುತ್ತೇವೆ ಎಂದರೆ ಸರಿ. ಅದರಂತೆ ಚಾಸಾ-2 ಮತ್ತು 3 ರವರು ವಾಹನಗಳನ್ನು ಎಡಕ್ಕೆ ಕಳುಹಿಸುವ ಕಾರ್ಯ ಮಾಡುತ್ತಿದ್ದರು ಎಂದರೆ ಸರಿ. ಮೃತ ಸುರೇಶ್ ಜೀಪ್ ನ ಮುಂಭಾಗ ಇದ್ದರು. ನಮ್ಮ ಜೀಪ್ ಹಿರಿಯೂರು ಕಡೆ ಮುಖ ಮಾಡಿ ನಿಂತಿತ್ತು. ರಸ್ತೆಯ ಮಧ್ಯಭಾಗದಲ್ಲಿ ಅಪಘಾತ ಸಂಭಂವಿಸಿರುತ್ತದೆ ಎಂದರೆ ಸರಿ. ನಮ್ಮ ಜೀಪ್ 3 ಪಥದ ಎಡಭಾಗದ ಪಥದಲ್ಲಿ ನಿಂತಿತ್ತು,

ಸುರೇಶ್ ವಾಹನದ ಮುಂಭಾಗ ನಿಂತಿದ್ದರು. ಸದರಿ ಅಪಘಾತದಿಂದ ನಮ್ಮ ಜೀಪ್‌ಗೆ ಯಾವುದೇ ಹಾನಿಯಾಗಿರುವುದಿಲ್ಲ. ಸದರಿ ದಿನ ಲಾರಿ ಚಾಲಕ ಲಾರಿಯನ್ನು ನಿಲ್ಲಿಸಿದೆ ಹೋಗಿದ್ದರಿಂದ ಆ ದಿನ ಲಾರಿ ಯನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆತನ ಹೆಸರು ಮತ್ತು ವಿಳಾಸ ನನಗೆ ಗೊತ್ತಿರಲಿಲ್ಲ. ಪೋಲಿಸರು ನನಗೆ ಲಾರಿ ಚಾಲಕನ ಹೆಸರನ್ನು ಹೇಳಿರುತ್ತಾರೆ. ಟೋಲ್ ಬಳಿ ವೇಗ ನಿಯಂತ್ರಕ ಹಂಪ್ ಗಳು ಇವೆ ಎಂದರೆ ಸರಿ. ಹಂಪ್ ಗಳ ಬಳಿ ವಾಹನಗಳು ನಿಲ್ಲಿಸಿ, ಮುಂದೆ ಸಾಗುತ್ತವೆ ಎಂದರೆ ಸರಿ.

ಮೃತ ಸುರೇಶ್ ರವರು ವಾಹನ ತಪಾಸಣೆ ಸಮಯದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆ ಹೋಗುವಾಗ ಈ ಅಪಘಾತ ಸಂಬಂವಿಸಿದೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿಂದ ಅಪಘಾತ ಸಂಭಂವಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಲಾರಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಸುರೇಶ್ ಅವರ ತಪ್ಪಿನಿಂದ ಅಪಘಾತವಾಗಿದ್ದು , ಅವರ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತ ದಿನ ನಾನು ಠಾಣೆಗೆ ಹೋಗಿಲ್ಲ, ಯಾವುದೇ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ದಿಃ28.05.2019 ರಂದು ಪೋಲಿಸರ ಮುಂದೆ ಮರು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ದಿನ ಲಾರಿ ಸಂಖ್ಯೆ ನನಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.